# ಎಂದೂ ಮರೆಯಲಾಗದ ‘ಸ್ವಾಗತ ಭಾಷಣ’!

ಹಳೆಯ ನೆನಪುಗಳನ್ನು ಮೆಲುಕು ಹಾಕಿದಾಗ, ಆಲ್ಬಂಗಳನ್ನು ತೆಗೆದು ನೋಡಿದಾಗ ಮನಸ್ಸಿಗೆ ಏನೋ ಒಂಥರ ಆನಂದವಾಗುತ್ತದೆ. ನನ್ನ ಬದುಕಿನ ಪುಟಗಳನ್ನು ತೆರೆದಾಗ ನನ್ನ ನೆನಪಿನಂಗಳದಲ್ಲಿ ಉಳಿದ ಘಟನೆ ಸುಮಾರು ಅರುವತ್ತು ವರ್ಷಗಳ ಹಿಂದಿನದ್ದು.

■ ಕೆ.ಎನ್. ಚಂದ್ರಶೇಖರ್




**ಕಾಲೇಜು ವಿದ್ಯಾರ್ಥಿ ಸಂಘದ ಕಾರ್ಯಕ್ರಮದಲ್ಲಿ ಸ್ವಾಗತ ಭಾಷಣ ಮಾಡುತ್ತಿರುವ ಕೆ.ಎನ್.ಚಂದ್ರಶೇಖರ್. ಚಿತ್ರದಲ್ಲಿ ಪಿ.ಸಿ. ರಾಮಸ್ವಾಮಿ ಅಯ್ಯಂಗಾರ್, ರಂಗನಾಥ್ ಹಾಗೂ ಶಿವಶಂಕರ್ ಇದ್ದಾರೆ.**

ಬಾಲ್ಯದ ನೆನಪು, ಶಾಲಾ ಕಾಲೇಜು ದಿನಗಳು, ಆ ದಿನಗಳಲ್ಲಿ ಕಂಡ, ಅನುಭವಿಸಿದ ಘಟನೆಗಳು, ಕಾರ್ಯಕ್ರಮಗಳು, ಅನುಭವಗಳು ಬದುಕಿನುದ್ದಕ್ಕೂ ಸವಿನೆನಪುಗಳಾಗಿ ಮನದಲ್ಲಿ ಅಚ್ಚೊತ್ತಿ ನಿಲ್ಲುತ್ತದೆ. ಈ ಅನುಭವಗಳು ಬದುಕಿಗೆ ಮಾರ್ಗದರ್ಶಕ ಮೆಟ್ಟಿಲುಗಳಾಗಿಯೂ ಪರಿಣಮಿಸುತ್ತದೆ. ಎಷ್ಟೋ ಸಲ ಇವೇ ನೆನಪುಗಳು ನಮ್ಮ ನೆಮ್ಮದಿಯ ಜೀವನಕ್ಕೂ ಸಹಾಯವಾಗುತ್ತದೆ. ನವಿರಾದ ಭಾವನೆಗಳಿಗೆ ಹಳೆಯ ನೆನಪುಗಳು ಸಾಥಿ ನೀಡಿ ಉತ್ತಮ, ಸಂತೋಷಮಯ ಜೀವನ ನಮ್ಮದಾಗುತ್ತದೆ.

ಈ ನೆನಪುಗಳನ್ನು ಮೆಲುಕು ಹಾಕಿದಾಗ, ಹಳೆಯ ಆಲ್ಬಂಗಳನ್ನು ತೆಗೆದು ನೋಡಿದಾಗ ಮನಸ್ಸಿಗೆ ಏನೋ ಒಂಥರ ಆನಂದವೂ ಆಗುತ್ತದೆ. ನನ್ನ ಬದುಕಿನ ಪುಟಗಳನ್ನು ತೆರೆದಾಗ ನನಗೆ ಲಭಿಸಿದ್ದು, ನೆನಪಿನಂಗಳದಲ್ಲಿ ಉಳಿದ ಘಟನೆ ಸುಮಾರು ಅರುವತ್ತು ವರ್ಷಗಳ ಹಿಂದಿನದ್ದು.

ನನಗೆ ಇನ್ನೂ ಚೆನ್ನಾಗಿ ನೆನಪಿದೆ. ಅದು 1956–1966 ವರೆಗೆ ನಾನು ಬೆಂಗಳೂರಿನ ಅಲಸೂರು ಕೆರೆಯ ಬಳಿ ಇರುವ ರಾಯ್ ಬಹದ್ದೂರ್ ಅರ್ಕಾಟ್ ನಾರಾಯಣ ಸ್ವಾಮಿ ಮೊದಲಿಯಾರ್ ಶಾಲೆಯಲ್ಲಿ ಅಧ್ಯಾಪಕನಾಗಿ ಕೆಲಸ ಮಾಡುತ್ತಿದ್ದ ದಿನಗಳು. ಆಗ ನನಗೆ ಬರುತ್ತಿದ್ದುದು ತಿಂಗಳಿಗೆ ನೂರು ರೂಪಾಯಿ ಮೂಲ ವೇತನ ಹಾಗೂ ಮೂವತ್ತು ರೂಪಾಯಿಗಳು ತಿಂಗಳಿನ ಭತ್ಯೆ. ಅದಕ್ಕೆ ನಾನು ಒಂದು ರೂಪಾಯಿ ಸೇರಿಸಿ ನಮ್ಮಮನ ಕೈಗೆ ಕೊಟ್ಟು ‘ಅಮ್ಮ, ನಾನು ಪ್ರತಿ ತಿಂಗಳು ನೂರಾರು ರೂಪಾಯಿ ಸಂಪಾದಿಸುತ್ತಿದ್ದೇನೆ’ ಎಂದು ಬಡಾಯಿ ಕೊಚ್ಚಿಕೊಳ್ಳುತ್ತಿದ್ದೆ. 1964–65 ಮತ್ತು 1965–66ನೇ ಶೈಕ್ಷಣಿಕ ವರ್ಷಗಳಲ್ಲಿ ನಾನು ಬೆಂಗಳೂರಿನ ರೇಣುಕಾಚಾರ್ಯ ಕಾನೂನು ಕಾಲೇಜಿನ ವಿದ್ಯಾರ್ಥಿಯಾಗಿದ್ದೆ. ಆಗ ಪದವೀಧರರಿಗೆ ಎರಡು ವರ್ಷಗಳ ಕಾಲ ಮಾತ್ರ ಕಾನೂನು ಅಧ್ಯಯನ ಮಾಡಿದರೆ ಕಾನೂನು ಪದವಿ ಪಡೆಯಬಹುದು ಎಂಬ ನಿಯಮವಿತ್ತು. ಕಾನೂನು ಪದವಿಯ ಮೊದಲನೆಯ ವರ್ಷದಲ್ಲಿ ನಾನು ವಿದ್ಯಾರ್ಥಿ ಸಂಘದ ಕಾರ್ಯದರ್ಶಿಯಾಗಿದ್ದೆ.

ಎರಡನೆಯ ವರ್ಷದಲ್ಲಿ ನಾನು ವಿದ್ಯಾರ್ಥಿ ಸಂಘದ ಅಧ್ಯಕ್ಷನಾಗಿದ್ದೆ. ಈ ಕಾರಣದಿಂದ ನನಗೆ ಎಲ್ಲಾ ಪ್ರಾಧ್ಯಾಪಕರು ಅದರಲ್ಲೂ ಪ್ರಾಂಶುಪಾಲರಾಗಿದ್ದ ಪ್ರೊ. ಪಿ. ಶಿವಶಂಕರ್ ಪರಿಚಿತರಾಗಿದ್ದರು. ವಿದ್ಯಾರ್ಥಿ ಸಂಘದ ಕಾರ್ಯಕ್ರಮಗಳಿಗೆ ಅಂದಿನ ಸಮಾಜದ ಗಣ್ಯ ವ್ಯಕ್ತಿಗಳನ್ನು ಆಹ್ವಾನಿಸುವ ಸಂಪ್ರದಾಯವಿತ್ತು. 1966ನೇ ಶೈಕ್ಷಣಿಕ ವರ್ಷದಲ್ಲಿ ಸ್ವತಂತ್ರ ಭಾರತದ ಪ್ರಪ್ರಥಮ ದಂಡನಾಯಕರಾಗಿ ನಿವೃತ್ತಿ ಹೊಂದಿದ್ದ ಅಂದಿನ ಜನರಲ್ ಮುಂದೆ ಫೀಲ್ಡ್ ಮಾರ್ಷಲ್ ಎಂದೆನಿಸಿಕೊಂಡಿದ್ದ ಕೆ.ಎಂ. ಕಾರ್ಯಪ್ಪನವರನ್ನು ವಿದ್ಯಾರ್ಥಿ ಸಂಘದಲ್ಲಿ ಭಾಷಣ ಮಾಡಲು ಆಹ್ವಾನಿಸಲಾಗಿತ್ತು. ಆಗ ಕಾರ್ಯಪ್ಪನವರಿಗೆ ಸುಮಾರು 58 ವರ್ಷ ವಯಸ್ಸಾಗಿತ್ತು. ಸ್ವಾಗತ ಭಾಷಣದಲ್ಲಿ ನಾನು ‘58 ವರ್ಷದ ‘ಯಂಗ್’ ಆಗಿರುವ ಕಾರ್ಯಪ್ಪನವರನ್ನು ನಿಮ್ಮೆಲ್ಲರ ಪರವಾಗಿ ಸ್ವಾಗತಿಸುತ್ತೇನೆ’ ಎಂದು ಹೇಳಿದೆ. ಪ್ರೇಕ್ಷಕರಿಂದ ಕರತಾಡನ, ದೊಡ್ಡ ಚಪ್ಪಾಳೆ ಕೇಳಿ ಬಂತು. ಮಾತಿನಿಂದಲೇ ನಗು ಉಕ್ಕಿಸಬಹುದು ಎಂಬ ಕಲೆ ಇದೆ ಎಂದು ನನಗೆ ಗೊತ್ತಾಗಿದ್ದೇ ಆಗ!

1966ನೇ ಶೈಕ್ಷಣಿಕ ವರ್ಷದಲ್ಲಿ ಕಾನೂನು ಪದವಿ ಪಡೆದುಕೊಂಡು, ಅಧ್ಯಾಪಕ ವೃತ್ತಿಗೆ ರಾಜೀನಾಮೆ ಕೊಟ್ಟು ಕರ್ನಾಟಕದ ಅತಿಶ್ರೇಷ್ಠ ನ್ಯಾಯವಾದಿಗಳಲ್ಲಿ ಒಬ್ಬರೆಂದು ಖ್ಯಾತನಾಮರಾಗಿದ್ದ ದಿ.ಎಸ್.ಜಿ. ಸುಂದರ ಸ್ವಾಮಿ ಅವರ ಬಳಿಯಲ್ಲಿ ಏಳು ವರ್ಷಗಳ ಕಾಲ ಜೂನಿಯರ್ ಲಾಯರ್ ಆಗಿ ಕೆಲಸ ಮಾಡಿದೆ. ದಿ. ಸುಂದರಸ್ವಾಮಿ ಅವರು ‘ಡೆಕ್ಕನ್ ಹೆರಾಲ್ಡ್’ ಮತ್ತು ‘ಪ್ರಜಾವಾಣಿ’ ಪತ್ರಿಕಾ ಸಮೂಹದ ಮಾಲೀಕರು ಮತ್ತು ಪ್ರಕಟಣೆ ಮಾಡುತ್ತಿದ್ದ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್ ಕಂಪನಿಯ ಕಾನೂನು ಸಲಹೆಗಾರರು ಹಾಗೂ ರಾಜ್ಯದ ಮಾಜಿ ಅಡ್ವೊಕೇಟ್ ಜನರಲ್ ಕೂಡ ಆಗಿದ್ದವರು. ಆಗ ನಾನು ವಕೀಲಿ ವೃತ್ತಿ ಬಗ್ಗೆ ಬಹಳಷ್ಟು ಕಲಿತೆ. ಹಲವು ರೋಚಕ ಅನುಭವಗಳು ನನಗಾದವು. ನಂತರ ಗಾಂಧೀನಗರದ ಒಂದನೇ ಮುಖ್ಯ ರಸ್ತೆಯಲ್ಲಿ ಇರುವ ಅವರ ಕಚೇರಿ ಬಳಿಯಲ್ಲಿಯೇ ಅವರ ಆಶೀರ್ವಾದ ಮತ್ತು ಪ್ರೋತ್ಸಾಹದಿಂದ ನನ್ನ ಸ್ವಂತ ವಕೀಲ ವೃತ್ತಿಯ ಕಚೇರಿ ಮಾಡಿಕೊಂಡು ಬಂದೆ. ಇದುವರೆಗೆ ಸುಮಾರು ಐವತ್ತು ವರ್ಷಗಳಿಗೂ ಮಿಗಿಲಾಗಿ ವಕೀಲಿ ವೃತ್ತಿಯಲ್ಲಿ ಈಗಲೂ ಸಕ್ರಿಯನಾಗಿದ್ದೇನೆ. ಕಾಲೇಜು ಮತ್ತು ವೃತ್ತಿ ಜೀವನದಲ್ಲಾದ ಘಟನೆಗಳನ್ನು ಎಂದೂ ಮರೆಯುವಂತಿಲ್ಲ. ■